1996-97

1)	ಶ್ರೀ ಬಸವೇಶ್ವರ ದೇ: ಮಾಯದೂಡಿ ಮಡಿಬೇಡು	20,000-00
2)	ಶ್ರೀ ಈಶ್ವರ ದೇ: ತಿಥಿಮತಿನುಕ್ಯಾ ಗ್ರಾಮ	20,000-00
3)	ಶ್ರೀ ಭಗವತಿ ದೇ: ಹೆಗ್ಗಳ ಕಕ್ಕೆಕೋಡು	20,000-00
	ಒಟ್ಟು	**- 60,000-00**

ಮಾಗಡಿ ತಾಲ್ಲೂಕಿನಲ್ಲಿ ಆಶ್ರಯಮನೆಗಳಿಗೆ ಹಣ ಬಿಡುಗಡೆಯಾಗದಿರುವುದು

604 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಆಶ್ರಯ ಸಮಿತಿಯನ್ನು ಈವರೆವಿಗೂ ರಚಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ರಚಿಸಿದ್ದಲ್ಲಿ ಯಾವಾಗ ರಚಿಸಲಾಗುವುದು?

ಆ) ಮಾಗಡಿ ಟೌನಿನಲ್ಲಿ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳಲು ಈ ವರೆವಿಗೂ ಸರ್ಕಾರದ ಹಣ ಬಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಕಾರಣವೇನು?

ಇ) ಬಡ ಫಲಾನುಭವಿಗಳಿಗೆ ತೊಂದರೆಯಾಗಿರುವುದರಿಂದ ಈ ಹಣವನ್ನು ಶೀಘ್ರವೇ ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಮಾಗಡಿ ತಾಲ್ಲೂಕಿನಲ್ಲಿ ಆಶ್ರಯ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಸದಸ್ಯರ ಹೆಸರುಗಳು ಈ ಕೆಳಕಂಡಂತಿದೆ :

1) ಶ್ರೀ ಹೆಚ್.ಆರ್. ಕೆಂಪೇಗೌಡ ಬಿನ್ ರಾಮೇಗೌಡ

2) ಶ್ರೀ ಸಯ್ಯದ್ ಜಾಫರ್ (ನಯಾಜ್) ಬಿನ್ ಸಯ್ಯದ್ ಇಮಾಂಸಾಬ್

3) ಶ್ರೀಮತಿ ಚಿಕ್ಕಬೋರಮ್ಮ ಬಿನ್ ಜವರಯ್ಯ

ಆ) 1995-96ನೇ ಸಾಲಿನಲ್ಲಿ 128 ಮನೆಗಳನ್ನು ಮಂಜೂರು ಮಾಡಲಾಗಿದೆ. ಹುಡ್ಕೋ ಸಂಸ್ಥೆ ಸಾಲ ಮಂಜೂರು ಮಾಡಲು ವಿಳಂಬವಾದ್ದರಿಂದ ಹಣ ಬಿಡುಗಡೆಗೆ ನಿಧಾನವಾಗಿದೆ.

ಇ) ಶೀಘ್ರದಲ್ಲೇ ಹಣ ಬಿಡುಗಡೆ ಮಾಡಲು ಕ್ರಮ ವಹಿಸಲಾಗಿದೆ.

ಮಾಗಡಿ ತಾಲ್ಲೂಕಿನ ಕೆಂಪಸಾಗರದ ಬಳಿ ಅಕ್ರಮ ಗಣಿಗಾರಿಕೆ

605 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಕೆಂಪಸಾಗರದ ಬಳಿ ಎರಡು ಕಡೆ ಅಕ್ರಮವಾಗಿ ಕೆಂಪು ಕಲ್ಲು

ಗಣಿಗಾರಿಕೆಯನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಅಕ್ರಮ ಗಣಗಾರಿಕೆ ಎಷ್ಟು ದಿನಗಳಿಂದ ನಡೆದಿದೆ, ಇದರಿಂದ ಸರ್ಕಾರಕ್ಕೆ ಆದ ನಷ್ಟವೇನು? ಇದನ್ನು ನಡೆಸುತ್ತಿರುವವರು ಯಾರು?

ಆ) *ಈ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು ಈ ಅಕ್ರಮ ಗಣಿಗಾರಿಕೆ ಮಾಡುತ್ತಿರುವವರ ವಿರುದ್ಧ ಸರ್ಕಾರವು ಯಾವ ಕ್ರಮಕೈಗೊಳ್ಳುವುದು?*

ಶ್ರೀ ಪಿ.ಜಿ.ಆರ್. ಸಿಂದ್ಯಾ (ಸಾರಿಗೆ ಸಚಿವರು) :

ಅ) ಹೌದು. ಈ ಪ್ರದೇಶದಲ್ಲಿ ಖನಿಜದ ಲಭ್ಯತೆ ಕನಿಷ್ಟವಾಗಿದ್ದು ಸ್ಥಳೀಯ ತಪಾಸಣೆ ಮಾಡಿದಾಗ ಕೆಂಪುಸಾಗರ, ದೊಮ್ಮಲೂರು ಪಾಳ್ಯ ಮತ್ತು ವಿಶ್ವನಾಥಪುರ ಗ್ರಾಮಗಳ ಕೆಲವು ಕೂಲಿಕಾರರು ಜೆಲ್ಲಿ ಕಲ್ಲು ತೆಗೆಯುವ ಉದ್ದೇಶದಿಂದ ಅಕ್ರಮವಾಗಿ ಕಲ್ಲು ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು ಅದು ಪುನರಾವರ್ತನೆಯಾಗದಂತೆ ಆಗಿಂದಾಗ್ಗೆ ಸ್ಥಳಕ್ಕೆ ಬೇಟಿಕೊಟ್ಟು ಕೂಲಿಕಾರರಿಗೆ ಕಾನೂನು ರೀತ್ಯಾ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ.

ಗಟ್ಟಿಪುರ ಗ್ರಾಮದ ಗಣಿಗಾರಿಕೆಯಿಂದ ಸಾರ್ವಜನಿಕರಿಗೆ ತೊಂದರೆ.

606 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನ ಗಟ್ಟಿಪುರ ಗ್ರಾಮದಲ್ಲಿ ಗಣಿಗಾರಿಕೆ ನಡೆಯುತ್ತಿರುವುದರಿಂದ ಗ್ರಾಮಸ್ಥರಿಗೆ ತೀವ್ರ ರೀತಿಯ ತೊಂದರೆಯಾಗಿರುವುದು, ಗ್ರಾಮಸ್ಥರ ಮನೆಗಳು, ಸರ್ಕಾರಿ ಶಾಲೆ ಬಿರುಕು ಬಿಡುತ್ತಿರುವುದು ಸರ್ಕಾರದವರು ಗಮನಕ್ಕೆ ಬಂದಿದೆಯೇ?*

ಆ) *ಈ ಗಣಿಗಾರಿಕೆಯನ್ನು ನಿಲ್ಲಿಸಲು, ಗ್ರಾಮಸ್ಥರಿಗೆ ತೊಂದರೆ ತಪ್ಪಿಸಲು ಯಾವ ಕ್ರಮವನ್ನು ಸರ್ಕಾರವು ಕೈಗೊಳ್ಳುವುದು?*

ಶ್ರೀ ಪಿ.ಜಿ.ಆರ್. ಸಿಂದ್ಯಾ (ಸಾರಿಗೆ ಸಚಿವರು) :

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ : ಸಿಐ 120 ಎಂಎಂಎನ್ 97, ದಿನಾಂಕ :6-10-97ರಲ್ಲಿ ಈ ಹಿಂದೆ ಶ್ರೀ ಅಬ್ದುಲ್ ಸತ್ತಾರ್ ಎಂಬುವವರಿಗೆ ನೀಡಿದ್ದ ಕಲ್ಲು ಗಣಿ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ. ಮತ್ತು ಅಲ್ಲಿ ಕಲ್ಲು ಗಣಿಗಾರಿಕೆಯನ್ನು ಸಹ ನಿಲ್ಲಿಸಲಾಗಿದೆ.